ನಿಂತುಹೋಯ್ತು. ಎರಡು ಬಾರಿ ಪ್ರಾಪ್ತವಾದ ಜೋಗ್ ಫಾಲ್ಸ್ ನೋಟದ ಭಾಗ್ಯವೂ ಅಂತೆಯೇ ಇಲ್ಲವಾಯ್ತು. ನಿಬಿಡ ಕಾಡಿನ ನಡುವೆ ಘಟ್ಟದ ಕಡಿದಾದ ರಸ್ತೆಗಳ ತಿರುವು ಮುರುವುಗಳಲ್ಲಿ ಅಪಘಾತಕ್ಕೀಡಾಗುವ, ಕೆಟ್ಟು ನಿಲ್ಲುವ ವಾಹನಗಳು! ಅಂತಲ್ಲಿ ಎದುರಾಗಬಹುದಾದ ವನ್ಯಮೃಗಗಳ, ದರೋಡೆಗಾರರ ಭಯದ ಆತಂಕವೂ ದೂರಾಗುವಂತೆ ಅಭಿವೃದ್ಧಿಯೆಂಬ ಗಾಳಿ ಅಲ್ಲೂ ಸುಳಿಯಿತು. ಕಾಡುಗಳು ನಾಶವಾಗುತ್ತಾ, ಏರಿಳಿತ, ತಿರುವು, ಮುರುವಿನ ರಸ್ತೆಗಳು ಹೆಚ್ಚು ಕಡಿಮೆ ನೇರವಾಗುತ್ತಾ ಬಂದುವು. ಬಸ್ಸಿನ ಕಿಟಕಿಯಲ್ಲಿ ಮುಖವಿಟ್ಟು ದಟ್ಟ ಕಾಡಿನ ನಿಬಿಡ ವೃಕ್ಷಗಳೆಡೆಯಲ್ಲಿ ಕಾಡುಮೃಗಗಳೋ, ಅಪರೂಪದ ಹಕ್ಕಿಗಳೋ, ಹಾವುಗಳೋ ಗೋಚರಿಸಬಹುದೇ ಎಂದು ಅರಸುತ್ತಿದ್ದ ಕಣ್ಣುಗಳಿಗೆ ನಿರಾಸೆಯೇ ಗತಿಯಾಯ್ತು.

ಬೆಳಿಗ್ಗೆ ಖಂಡಾಲಾ ಪ್ರವೇಶಿಸುವ ಬಸ್, ಮತ್ತೆ ಆ ಪರ್ವತಶ್ರೇಣಿಯಿಂದ ಹೊರಬರಲು ಅರ್ಧ ಗಂಟೆ ಹಿಡಿಯ ಬಹುದು, ಇಲ್ಲಾ ಎರಡು ಗಂಟೆಯಾದರೂ ಆದೀತೇ!. ಆ ಏರಿಳಿದು ಸುತ್ತಿ ಸುಳಿವ ಕಡಿದಾದ ಬೆಟ್ಟ, ಕಣಿವೆಯ ಸಪೂರ ರಸ್ತೆಗಳಲ್ಲಿ ಅದಾಗಲೇ ಘಟಿಸಿರಬಹುದಾದ ಅಪಘಾತಗಳು, ಕೆಟ್ಟು ನಿಂತ ವಾಹನಗಳ ಮೇಲೆ ನಮ್ಮ ಅದೃಷ್ಟ ಅವಲಂಬಿತವಾಗಿರುತ್ತಿತ್ತು. ಅವನ್ನು ಎಬ್ಬಿಸಿ, ದಾರಿ ತೆರವಾದುದಲ್ಲದೆ ಮುಂದುವರಿಯುವಂತಿರಲಿಲ್ಲ. ಮುಂದೆ ಸಾಗಲು ದಾರಿಯೇ ಇರುತ್ತಿರಲಿಲ್ಲ. ತಡೆದು ನಿಂತ ಬಸ್ಸುಗಳಲ್ಲಿ ಮಕ್ಕಳ ಅಳು, ಹಸಿದವರ, ಕೈಲಾಗದವರ ಗೊಣಗಾಟ, ಡ್ರೈವರ್ ಪರಚಾಟ ನಡೆದೇ ಇರುತ್ತಿತ್ತು. ಡಯಪರ್‌ಗಳಿಲ್ಲದ ಆ ಕಾಲದಲ್ಲಿ ಬಸ್ ಪಯಣದಲ್ಲಿ ಚಡ್ಡಿ ಒದ್ದೆ ಮಾಡಿಕೊಂಡ ಮಕ್ಕಳ ಅಳು ಅಡಿಗಡಿಗೆ ಕೇಳಿ ಬರುತ್ತಿತ್ತು. ಅದೇ ಈಗ ಡಯಪರ್‌ಗಳಿಂದಾಗಿ ಮಕ್ಕಳು ಅಳುವುದೆಂದೇ ಇಲ್ಲ. ಮಕ್ಕಳ ಸಂಖ್ಯೆಯೂ ಈಗ ಕಡಿಮೆ, ಎನ್ನಿ!

ಹಿಂದೆ ಖಂಡಾಲಾ ಘಾಟ್ ಬಂತೆಂದರೆ, ನಿದ್ರಿಸಿದವರ ನಿದ್ದೆಯೂ ಮಾಯವಾದರೆ, ಈಗ ನಿದ್ರಿಸಿದವರಿಗೆ ಎಚ್ಚರಾಗದೇ ಖಂಡಾಲಾ ದಾಟಿ ಹೋಗುವುದೂ ಇದೆ. ಅಷ್ಟೊಂದು ಮಟ್ಟಿನ ಸುರಕ್ಷಿತ, ಸುಗಮ ಸಂಚಾರಕ್ಕೆ ಅನುವಾಗುವಂತೆ ಈ ಕಡಿದಾದ ಪರ್ವತ ಶ್ರೇಣಿಯ ರಸ್ತೆಗಳನ್ನು ಅಗಲಗೊಳಿಸಲಾಗಿದೆ. ವಾಹನಗಳು ತಡೆಯಿರದೆ ಸಂಚರಿಸಲು ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗಿದೆ. ಮಳೆಗಾಲದಲ್ಲಿ ನಯನ ಮನೋಹರವಾಗಿ ಅಲ್ಲಲ್ಲಿ ಇಳಿವ ಜಲಪಾತಗಳೊಡನೆ ಮೇಲಿನಿಂದ ಜಾರುವ ಬಂಡೆಗಳನ್ನು ತಡೆಯಲು ಉಕ್ಕಿನ ಬಲೆಗಳನ್ನು ಹೆಣೆದು ಬೆಟ್ಟದ ಮೈಯನ್ನು ಆಚ್ಛಾದಿಸಲಾಗಿದೆ. ಸ್ವಲ್ಪ ಅನುವು ದೊರೆತರೂ ಹಿಂದಿನಿಂದ ಓವರ್‌ಟೇಕ್ ಮಾಡಿ ಮುಂದೆ ಸಾಗುವ ವಾಹನಗಳೂ ಇಲ್ಲದಿಲ್ಲ. ಆದರೆ ಆ ಅಂದಿನ ಪ್ರಯಾಸಕರ ದುರ್ಗಮ ಸಂಚಾರದ ಹಳೆಯ ದಿನಗಳಲ್ಲಿ ಕಂಡ ಭೀಕರ ಅಪಘಾತ ದೃಶ್ಯಗಳು ಮಾತ್ರ ಮನದಲ್ಲಿ ಉಳಿದೇ ಬಿಟ್ಟಿವೆ. ಮಂಜು ಮುಸುಕಿದ ಪರ್ವತಶ್ರೇಣಿ, ಶಿಖರಾಗ್ರ, ಕಣಿವೆ, ಪ್ರಪಾತಗಳ ಸುರಮ್ಯ ನೋಟವನ್ನು ಆಸ್ವಾದಿಸುವ ಬದಲಿಗೆ ಕಿಟಕಿಯ ಪರದೆಯೆಳೆದು ನಿದ್ದೆ ಹೋಗುವ ನತದೃಷ್ಟರ ಬಗ್ಗೆ ಅಸಹನೆಯೆನಿಸುತ್ತದೆ.

ಮುಂಬೈಯ ನಮ್ಮೀ ಘಾಟ್‌ಕೋಪರ್ ಪ್ರದೇಶದಲ್ಲಿ ನೆಲೆನಿಂತ ಹೊಸದರಲ್ಲಿ ನಮ್ಮ ಪೂರ್ವದಿಕ್ಕಿಗೆ ಥಾನಾ ಕ್ರೀಕ್‌ನ ಸೇತುವೆಯ ದೀಪಮಾಲೆ, ದಕ್ಷಿಣಕ್ಕೆ ಟ್ರಾಂಬೆ ಹಿಲ್, ಪಶ್ಚಿಮದಲ್ಲಿ ಏರ್‌ಪೋರ್ಟ್‌ಗಿಳಿವ ವಿಮಾನಗಳು, ಉತ್ತರಕ್ಕೆ ಅಸಲ್ಫಾ ಬೆಟ್ಟಗಳೆತ್ತರಕ್ಕೂ ಬೆಂಕಿ ಪೆಟ್ಟಿಗೆಗಳಂತೆ ಕಾಣುವ ಜನವಸತಿಯ ಗುಡಿಗುಡಾರಗಳು ದೃಗ್ಗೋಚರವಾಗುತ್ತಿದ್ದುವು. ಈಗ ಅದೊಂದೂ ಕಾಣದಂತೆ ನಾಲ್ದಿಕ್ಕುಗಳಲ್ಲೂ ಕಟ್ಟಡಗಳೆದ್ದು ಗಗನಗಾಮಿಯಾಗಿ ಬೆಳೆದಿವೆ. ಮಳೆಗಾಲದಲ್ಲಿ



ಹಸಿರಾಗಿ, ಮಳೆ ನಿಂತ ಬಳಿಕ ಒಣಬೆಟ್ಟವಾಗಿ ಗೋಚರಿಸುವ ಟ್ರಾಂಬೆ ಹಿಲ್‌ನ ಕೆಳಗೆ ರಿಫೈನರಿಯ ಕೊಳವೆಯಿಂದ ಹೊರಬಿದ್ದು ಹೊತ್ತಿ ಉರಿವ ಜ್ವಾಲೆಯೂ ಮರೆಯಾಗುವಂತೆ ಕಟ್ಟಡಗಳೆದ್ದಿವೆ.

ಘಾಟ್‌ಕೋಪರ್‌ನ ರಾಜಮಹಲು, ಹವೇಲಿಗಳೆಲ್ಲ ಅಳಿಯುತ್ತಾ ಬಂದಂತೆ, ಬಹುಮಹಡಿ ವಸತಿ, ವಾಣಿಜ್ಯ ಸಂಕೀರ್ಣಗಳು ಎದ್ದು ನಿಂತರೂ ಇಲ್ಲಿನ ವೃಕ್ಷಸಂಪತ್ತು ಮಾತ್ರ ಅಳಿಯದೆ ಉಳಿದಿದೆ. ನಮ್ಮೂರಲ್ಲೇ ಈಗ ಅಪರೂಪವಾಗಿರುವ ನಾಗಸಂಪಿಗೆ ಮರಗಳು, ಅತ್ತಿ, ಅಶ್ವತ್ಥಮರಗಳು ಇಲ್ಲಿ ಹೆಜ್ಜೆ ಹೆಜ್ಜೆಗೂ ಕಂಡುಬರುತ್ತವೆ. ವಲ್ಲಭ್ ಬಾಗ್ ಲೇನ್ ಎಂಬ ನಮ್ಮ ಈ ರಸ್ತೆಯಲ್ಲೂ, ಇತರ ಗಲ್ಲಿ ಗಲ್ಲಿಗಳಲ್ಲೂ ಇರುವ ಉದ್ಯಾನಗಳಿಂದಾಗಿ ಪಕ್ಷಿಲೋಕವೇ ಇಲ್ಲಿ ವಿಜೃಂಭಿಸಿದೆ. ನಮ್ಮೆದುರಿನ ಅಶ್ವತ್ಥಮರವಂತೂ ಅಸಂಖ್ಯ ಗಿಳಿ, ಪಾರಿವಾಳ, ಕಾಗೆ, ಮೈನಾ, ಮರಕುಟಿಗಗಳ ಬೀಡಾಗಿದೆ. ಹಸಿರಿನ ಹಚ್ಚಡವೇ ಹಾರಿದಂತೆ ಗಿಳಿವಿಂಡು ಕಿಲಿ ಕಿಲಿಯೆನ್ನುತ್ತಾ ನಮ್ಮ ಕಟ್ಟಡಕ್ಕೆ ಸುತ್ತು ಬರುತ್ತಿರುತ್ತದೆ. ಹೊಳೆವ ನೀಲವರ್ಣದ ಮಿಂಚುಳ್ಳಿಗಳೂ, ಚಳಿಗಾಲದಲ್ಲಿ ಹೊಂಬಣ್ಣದ ಗೋಲ್ಡನ್ ಒರಿಯೋಲ್‌ಗಳೂ ಆಗೀಗ ಕಾಣಿಸಿಕೊಳ್ಳುತ್ತವೆ. ನಮ್ಮ ಕಿಟಿಕಿ ಪಕ್ಕದ ಕಾಪರ್‌ವುಡ್ ಮರದಲ್ಲಿ ಒಂದು ವರ್ಷ ಆಫ್ರಿಕಾ ದೇಶದ ನೈಟ್ ಹೆರನ್ ಪಕ್ಷಿಗಳೆರಡು ಗೂಡುಕಟ್ಟಿ ಮರಿ ಮಾಡಿದ್ದುವು. ಮರಿಗಳು ದೊಡ್ಡದಾದ ಮೇಲೆ ಹಾರಿಹೋದ ಹಕ್ಕಿಗಳು ಮುಂದಿನ ವರ್ಷ ಮರಳಿ ಬರಬಹುದೆನ್ನುವ ನನ್ನ ನಿರೀಕ್ಷೆ ಹುಸಿಯಾಗಿಯೇ ಉಳಿದಿದೆ.

ಒಂದು ಬೆಳಿಗ್ಗೆ ನಮ್ಮ ಕಿಟಿಕಿಯ ಬಾಕ್ಸ್ ಗ್ರಿಲ್‌ನೊಳಗೆ ದೊಡ್ಡ ಗೂಬೆಯೊಂದು ತೂರಿ ಬಂದು ನಿಂತು ಹಗಲು ಕಳೆಯಲಿಚ್ಛಿಸಿತ್ತು. ಆದರೆ ಗೂಬೆಯನ್ನು ಕಾಣ ಬಂದ ಕೆಳಗಿನ ಮಕ್ಕಳ ಕಲರವಕ್ಕೆ ಬೆದರಿ ಅದು ಹೊರಟುಹೋಯ್ತು. ಮರಗಳಲ್ಲೂ, ಕೇಬಲ್ ವಯರ್‌ಗಳಲ್ಲೂ ಜಿಗಿದಾಡುತ್ತಾ ಬಾಲ್ಕನಿಯ ನಮ್ಮ ಹೂಗಿಡಗಳನ್ನೆಲ್ಲ ಧ್ವಂಸಗೈಯುವ ವಿಧ್ವಂಸಕ ಅಳಿಲುಗಳನ್ನು ಶ್ರೀರಾಮನ ಸಾಧುಪ್ರಾಣಿಗಳೆಂದು ಕರೆದವರು ಯಾರೋ?! ಹಗಲಿನ ಈ ವಿಧ್ವಂಸಕ ಕೃತ್ಯದಲ್ಲಿ ಅಳಿದುಳಿದುದನ್ನು ಮುಗಿಸಿ ಬಿಡಲು ರಾತ್ರಿ ಎದ್ದು ಬಂದು ಕುಂಡಗಳ ಮಣ್ಣನ್ನೇ ಅಗೆದು ಹೊರಹಾಕುವ ಇಲಿಗಳು! ಹಿತ್ತಿಲೆಂದಿಲ್ಲವಾಗಿ ಕೆಳಗೆ ರಸ್ತೆಯಲ್ಲಿ ಪಾರ್ಕ್ ಮಾಡಲಾದ ಕಾರುಗಳು ಈ ಮೂಷಿಕದಂಶನದಿಂದ ಆಗಾಗ ವಯರ್ ಕತ್ತರಿಸಲ್ಪಟ್ಟು ನಿಷ್ಕ್ರಿಯವಾಗುಳಿಯುತ್ತವೆ. ಕಾರಿನ ಬಾನೆಟ್‌ನಲ್ಲಿ ಖಾವುಗಲ್ಲಿಯ ತಿಂಡಿ, ತಿನಿಸಿನ ಅವಶೇಷಗಳು ಶೇಖರವಾಗಿರುತ್ತವೆ!

ಖಾವುಗಲ್ಲಿಯೆಂದೇ ಖ್ಯಾತವಾದ ನಮ್ಮೀ ರಸ್ತೆಯಲ್ಲಿನ ತರಹೇವಾರಿ ತಿಂಡಿ ಗಾಡಿಗಳ ಸಮೃದ್ಧಿಯೇ ಇಲ್ಲಿ ಇಲಿಗಳ ಹೆಚ್ಚಳಕ್ಕೆ ಕಾರಣ. ಪಾನಿಪುರಿ, ಬೇಲ್‌ಪುರಿ, ಶೇವ್‌ಪುರಿ, ರಗ್ಡಾ ಪ್ಯಾಟೀಸ್, ದಾಭೇಲಿ, ವಿವಿಧ ತರಹದ ದೋಸೆಗಳು, ಗ್ರಿಲ್ಡ್ ಸ್ಯಾಂಡ್‌ವಿಚ್‌ಗಳು, ಗೋಲಾ, ಕುಲ್ಫಿಗಳೆಂದು ಜಿಹ್ವಾಚಾಪಲ್ಯ ತಣಿಸುವ ಕೈಗಾಡಿಗಳು, ಇಲ್ಲಿ ರಸ್ತೆ ತುಂಬಿ ನಿಂತಿರುತ್ತವೆ. ಅವುಗಳ ಸುತ್ತ ಮುಕ್ಕಿರಿದು ತುಂಬಿದ ಜನರ ನಡುವೆ, ಸಂಚಾರ ಇಲ್ಲಿ ಏಕಮುಖವೇ ಆದರೂ ದಾರಿ ಬಿಡಿಸಿಕೊಂಡು ಹೋಗಬೇಕಾದ ವಾಹನಗಳ ಪಾಡು ದುರ್ಭರ! ಅವುಗಳ ಕರ್ಕಶ ಹಾರ್ನ್ ಶಬ್ದದ ಕಾಟಕ್ಕೂ, ಮುಂಬೈ ಆಡುಭಾಷೆಯ ಅಸಹ್ಯ ಬೈಗುಳಗಳ ಭರಾಟೆಗೂ ಕಿವಿಗಳನ್ನು ಕಳಕೊಳ್ಳುವ ನಮ್ಮ ದುರವಸ್ಥೆ ಹೇಳತೀರದು! ನಾಲ್ಕು ಮಾಳಿಗೆಯ ಮೇಲಿದ್ದರೂ, ಫೋನ್‌ನಲ್ಲಿ ಸಂಭಾಷಣೆಯಲ್ಲಿದ್ದರೆ, ಅತ್ತ ಇರುವವರಿಗೂ ಕೇಳಿಸುವ ಕೆಳಗಣ ರಸ್ತೆಯ ಧ್ವನಿ ತರಂಗಗಳಿಂದ, ‘ಎಲ್ಲಿ, ಹೊರಗಿದ್ದೀರಾ? ರಸ್ತೆಯಲ್ಲಿದ್ದೀರಾ?’ ಎಂಬ ಪ್ರಶ್ನೆ ಸಾಮಾನ್ಯ! ಅವರ ಆಹಾರದಲ್ಲಿ ಎಣ್ಣೆಯಂಶ ಅಧಿಕವಾಗಿಯೇ ಇರುವುದರಿಂದಲೋ ಏನೋ, ಗುಜರಾತಿಗಳ ದನಿಯ ಮಟ್ಟ ನಮಗಿಂತ ಬಹಳ ಎತ್ತರದಲ್ಲಿರುವುದು ಇಷ್ಟು ವರ್ಷಗಳ